ಗಂಗಾವತಿಯಲ್ಲಿ ಫೈರ್ ಸ್ಟೇಷನ್ ಸ್ಥಾಪಿಸುವುದು

೨೪೧೦ ಶ್ರೀ ಶ್ರೀರಂಗದೇವರಾಯಲು (ಕನಕಗಿರಿ).—ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗಂಗಾವತಿ ಸುತ್ತಮುಂತ್ತಲ ಹಳ್ಳಿಗಳಲ್ಲಿ ಗುಡಿಸಲುಗಳಿಗೆ ಬೆಂಕಿ ಹತ್ತಿದರೆ ಹೊಸ ಪೇಟೆಯಿಂದ ಫೈರ್ ಇಂಜಿನ್ ಬರಬೇಕಾಗಿದ್ದು, ಅಷ್ಟರಲ್ಲಿ ಗುಡಿಸಲುಗಳು ಸುಟ್ಟು ಹೋಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಗಂಗಾವತಿಯಲ್ಲಿ ಫೈರ್ ಸ್ಟೇಷನ್ ಸ್ಥಾಪಿಸಲು ಗಂಗಾವತಿಯ ಎ. ಪಿ. ಎಂ. ಎಸ್. ಯವರು ಇದಕ್ಕಾಗಿ ಜಾಗ ಮುಂತಾದ ಅನುಕೂಲ ಮಾಡಿಕೊಡಲು ಮುಂದೆ ಬಂದಿರುವುದರಿಂದ ಕೊಡಲೇ ಸರ್ಕಾರದವರು ಆ ಬಗ್ಗೆ ಕ್ರಮ ಕೈಕೊಳ್ಳುವರೆ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

ಅ) ಬುದಿದೆ

ಆ) ಈ ವಿಷಯವು ಪರಿಶೀಲನೆಯಲ್ಲಿದೆ.

ಖೋಟ ಸ್ವಾತಂತ್ರ್ಯಯೋಧರ ವಿಚಾರ

೧೬೯೯ ಶ್ರೀ ಬಾಬುರೆಡ್ಡಿ ವಿ. ತುಂಗಳ (ಬೀಳಗಿ).—ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಜಾಕಾರ ಚಳುವಳಿಯಲ್ಲಿ ಹೋರಾಡಿದವರಿಗೂ ಸ್ವಾತಂತ್ರ್ಯಯೋಧರೆಂಬ ಮಾನ್ಯತೆಯನ್ನು ಸರ್ಕಾರವು ಕೊಡ ಮಾಡಿರುವುದು ನಿಜವೆ ?

ಆ) ರೋಣ ಹಾಗೂ ಯಲ್ಬುರ್ಗಾ ತಾಲ್ಲೂಕುಗಳಲ್ಲಿ ಈ ಚಳುವಳಿಯ ಹೆಸರಿನಲ್ಲಿ ಖೋಟ ಸ್ವಾತಂತ್ರ್ಯ ಯೋಧರು ಹುಟ್ಟಿ ಕೊಂಡು ಅಕ್ರಮವಾಗಿ ಮಾಸಾಶನ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಖೋಟ ಸ್ವಾತಂತ್ರ್ಯ ಯೋಧರನ್ನು ಗುರುತಿಸಿ ಅಂಥವರ ವಿರುದ್ಧ ಕ್ರಮ ಕೈಗೊಳ್ಳಲು ಉದ್ದೇಶಿಸಲಾಗಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

ಅ) ಹೌದು.

ಆ) ಬಂದಿದೆ.

ಇ) ಸುಳ್ಳು ದಾಖಲೆಗಳ ಆಧಾರದ ಮೇಲೆ ರಾಜ್ಯ ಗೌರವಧನ ಪಡೆಯುತ್ತಿರುವ ನಿರ್ದಿಷ್ಟ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಲ್ಲಿ ನಿಯಮಾವಳಿ ಪ್ರಕಾರ ವಿಚಾರಣೆ ನಡೆಸಿ ರದ್ದು ಗೊಳಿಸಲಾಗುವುದು.

ಮಾಜಿ ಶಾಸಕರಿಗೆ ಬಸ್ ಪಾಸ್ ಸೌಲಭ್ಯ

೧೬೦೮. ಶ್ರೀ ಬಿ. ವಿ. ತುಂಗಳ್ (ಬೀಳಗಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಾಜಿ ಶಾಸಕರಿಗೆ ಉಚಿತ ಪ್ರಯಾಣಕ್ಕಾಗಿ ಬಸ್ ಪಾಸ್ ಒದಗಿಸುವ ವಿಚಾರವೇನಾದರೂ ಸರ್ಕಾರದಲ್ಲಿದೆಯೇ ?

ಶ್ರೀ ಪಿ. ಜಿ. ಆರ್ ಸಿಂಧ್ಯ (ಸಾರಿಗೆ ಸಚಿವರು).—

ಅ) ಪರಿಶೀಲನೆಯಲಿಲ್ಲ.